ಫ್ಯಾಕ್ಸ್/Fax : 080-25586321
ಈಮೇಲ್/E-mail : ho@kspcb.gov.in
ವೆಬ್‌ಸೈಟ್/Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ. ಮಾನಿಮ/37(Vol-3)/COC/2015/ 178 ದಿನಾಂಕ: 08 APR 2021

ರವಾನಿಸಲಾಗಿದೆ

## ಜ್ಞಾಪನ ಪತ್ರ

ವಿಷಯ: ಸಮ್ಮತಿ ಶುಲ್ಕ ಪರಿಷ್ಕರಣೆ ಹಿನ್ನೆಲೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು.

ಉಲ್ಲೇಖ: 1) ಸರ್ಕಾರದಿಂದ ಹೊರಡಿಸಲಾದ ರಾಜ್ಯ ಪತ್ರ ದಿನಾಂಕ: 12.11.2020.
2) ಮಂಡಳಿಯ ಮೆಮೋ ಸಂಖ್ಯೆ.PCB/37(Vol-3)/COC/2015/4989, ದಿ: 6.2.2021

****

ಸರ್ಕಾರವು ದಿ: 12.11.2020 ರಲ್ಲಿ ಹೊರಡಿಸಿರುವ ರಾಜ್ಯ ಪತ್ರದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಮ್ಮತಿ ಶುಲ್ಕವನ್ನು ದಿ: 12.11.2020 ರಿಂದ ಜಾರಿಗೆ ಬರುವಂತೆ ಉಲ್ಲೇಖ (1) ರಲ್ಲಿ ಪರಿಷ್ಕರಿಸಿರುತ್ತದೆ. ಈ ಕುರಿತು ಮಂಡಳಿಯು ಉಲ್ಲೇಖ (2) ರಲ್ಲಿ ಮೆಮೋ ಹೊರಡಿಸಿರುತ್ತದೆ. ತದನಂತರದಲ್ಲಿ ವಿವಿಧ ಕೈಗಾರಿಕೆಗಳು ಹಾಗು ಕೈಗಾರಿಕಾ ಸಂಘಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಮತ್ತು ರಾಜ್ಯ ಸರ್ಕಾರಕ್ಕೆ ಸಮ್ಮತಿ ಶುಲ್ಕದ ಪರಿಷ್ಕರಣೆಯ ಕುರಿತಾಗಿ ಮರು ಪರಿಶೀಲನೆಗೆ ಸಲ್ಲಿಸಿದ ಮನವಿಗಳ ಹಿನ್ನಲೆಯಲ್ಲಿ ದಿ: 23.3.2021 ರಂದು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಹಾಗು ಮಾನ್ಯ ಪ್ರವಾಸೋದ್ಯಮ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರುಗಳ ಜಂಟಿ ಅಧ್ಯಕ್ಷತೆಯಲ್ಲಿ ಕೈಗಾರಿಕಾ ಇಲಾಖೆ, ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆಯ ಅಧಿಕಾರಿಗಳು ಹಾಗು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಲಾಗಿರುತ್ತದೆ. ಸದರಿ ಸಭೆಯಲ್ಲಿ ಸಮ್ಮತಿ ಶುಲ್ಕದ ಪರಿಷ್ಕರಣೆಯ ಕುರಿತಾಗಿ ಮಾರ್ಪಾಡಿಗೆ ಹಲವು ಸೂಚನೆಗಳನ್ನು ನೀಡಿರುತ್ತಾರೆ. ಮುಂದುವರೆದು ಸಮ್ಮತಿ ಶುಲ್ಕದ ಪರಿಷ್ಕರಣೆಯ ಮರು ಪರಿಶೀಲನೆ ಕುರಿತಾಗಿ ಕಲ್ಲುಪುಡಿ ಮಾಡುವ ಘಟಕಗಳ ಸಂಘವು ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರಿಗೆ ಮನವಿಗಳನ್ನು ಸಲ್ಲಿಸಿದ್ದು, ಮಾನ್ಯ ಸಚಿವರು ದಿ: 26.3.2021 ರಂದು ಸಭೆಯನ್ನು ಕರೆದಿದ್ದು, ಈ ಸಭೆಯಲ್ಲಿ ವಿಷಯ ಕುರಿತು ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಪರಿಸ್ಥಿತಿ ಇಲಾಖೆ ಇವರೊಂದಿಗೆ ಚರ್ಚಿಸಿರುತ್ತಾರೆ.

ಮೇಲೆ ತಿಳಿಸಿದಂತೆ, ಸಮ್ಮತಿ ಶುಲ್ಕ ಮರು ಪರಿಶೀಲನೆ ಕುರಿತಾಗಿ ಮಾನ್ಯ ಸಚಿವರುಗಳೊಂದಿಗೆ ನಡೆದ ಸಭೆಗಳಲ್ಲಿ ಸೂಚಿಸಿರುವ ಅಂಶಗಳ ಕುರಿತಾಗಿ ಇಲಾಖೆ ಹಂತದಲ್ಲಿ ಪರಿಶೀಲನೆ ನಡೆಸಲಾಗುತ್ತಿದ್ದು, ಈ ಕುರಿತು ಅಂತಿಮ ನಿರ್ಣಯವಾಗುವವರೆಗೆ ಸಮ್ಮತಿ ಅರ್ಜಿಗಳ ವಿಲೇವಾರಿ ಹಿತದೃಷ್ಟಿಯಿಂದ ಸಮ್ಮತಿ ಶುಲ್ಕವನ್ನು ಕೈಗಾರಿಕೆಗಳಿಂದ ಪಾವತಿಸಿಕೊಂಡು, ಸದರಿ ಸಮ್ಮತಿ ಅವಧಿಯಲ್ಲಿ ಹೆಚ್ಚುವರಿ ಸಮ್ಮತಿ ಶುಲ್ಕದ ವ್ಯತ್ಯಾಸ ಪಾವತಿಗೆ ಮುಚ್ಚಳಿಕೆ ಪಡೆದುಕೊಂಡು ಸಮ್ಮತಿ ಅರ್ಜಿಗಳನ್ನು ವಿಲೇವಾರಿ ಮಾಡಲು ಸೂಚಿಸಲಾಗಿದೆ. ಈ ಆದೇಶ ತಕ್ಷಣದಿಂದ ಹಾಗು ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.

**Note: In case new consent fee is deposited, there is no need for any undertaking.**

ಸದಸ್ಯ ಕಾರ್ಯದರ್ಶಿ

ಇವರಿಗೆ

o/c

CEO (1) - Section - M. Venkatesh 08/4/2021

1) ಎಲ್ಲಾ ಮುಖ್ಯ ಪರಿಸರ ಅಧಿಕಾರಿಗಳು.
2) ಎಲ್ಲಾ ವಲಯ ಹಿರಿಯ ಪರಿಸರ ಅಧಿಕಾರಿಗಳು.
3) ಎಲ್ಲಾ ಹಿರಿಯ ಪರಿಸರ ಅಧಿಕಾರಿಗಳು.
4) ಎಲ್ಲಾ ಪ್ರಾದೇಶಿಕ ಅಧಿಕಾರಿಗಳು.
5) ಕೇಂದ್ರ ಕಛೇರಿಯ ಎಲ್ಲಾ ಶಾಖಾ ಮುಖ್ಯಸ್ಥರುಗಳಿಗೆ.
6) ಸಹಾಯ ಮೇಜು.

Savitha H 8/4/2021

Infra - Adua 8/4/21

ECC - BN (CEO-3) 8/4/21

AQMC - BKRajanth 8/4/21

17Cat 8/4/21

NEIA-03 - 8/4/21

Mines - 08/04/21

WMC - 8/4/21

NGTMC - 08.04.21

MJ - 8/4

(BLDG) 8/4/21

PRO → 08/04/21

Legal Section : 8/4/2021

CEO-2 - 8/4/21

Accounts) CFO 8/4/21

8/4/21 Aducia

e-gov

8/4/21

IT

8/4/21